
ಮೊದಲಾದವರು ತಮ್ಮ ಆತ್ಮ ಗೌರವಕ್ಕೆ ಧಕ್ಕೆ ಬಂದಾಗ ಪತಿಭಕ್ತಿ, ವಿಧೇಯತೆ, ಪಾತಿವ್ರತ್ಯಗಳನ್ನು ಮೀರಿ ನಡೆದುಕೊಂಡು, ಸ್ಥಾಪಿತ ನಿಲುವುಗಳನ್ನು ಪಲ್ಲಟಗೊಳಿಸುತ್ತಾರೆ. ಇಂಥ ಸ್ತ್ರೀ ಪಾತ್ರಗಳು ವಿಕೃತ ಪಾತ್ರಗಳಲ್ಲ. ಬದಲಾಗಿ ಪುರುಷ ಪಾರಮ್ಯವನ್ನು ಮುರಿದು, ಅನ್ಯಾಯದ ವಿರುದ್ಧ ಹೋರಾಡಿ ಜಯ ಪಡೆಯುವ ಶಕ್ತಿಗಳು. ಸಂಸ್ಕೃತಿಯೊಂದರ ಹೆಣ್ಣುತನದ ಅಸ್ತಿತ್ವ ಹಾಗೂ ಪ್ರಾಧಾನ್ಯವನ್ನು ನಾವು ಅರ್ಥಮಾಡಿಕೊಂಡಷ್ಟೂ ನಮ್ಮ ಅರಿವಿನ ವಲಯಗಳು ವಿಸ್ತಾರವಾಗುತ್ತವೆ. ಮಹಿಳೆಯ ಬಗ್ಗೆ ಆದರ ಮೂಡುತ್ತದೆ. ಇದು ಇಂದು ಅಗತ್ಯವಾಗಿ ಆಗಬೇಕಾದ ಕೆಲಸ.

◆ **ನೀವು ಹಳಗನ್ನಡ ಸೇರಿದಂತೆ ಸಾಹಿತ್ಯದ ಉತ್ತಮ ಅಧ್ಯಾಪಕರು. ಜನಪ್ರಿಯರು ಕೂಡ. ಈ ವೃತ್ತಿಯಲ್ಲಿನ ನಿಮ್ಮ ಅನುಭವದ ಬಗ್ಗೆ ಕೊಂಚ ಹೇಳಿ...**




ಹಾಗೇನೂ ಇಲ್ಲ. ನವದೆಹಲಿಯಲ್ಲಿ ನಾಗರಿಕ ಸೇವಾ ಪರೀಕ್ಷೆಗಳಿಗೆ ಹಾಜರಾಗುವ ಸುಮಾರು 100 ವಿದ್ಯಾರ್ಥಿಗಳಿಗೆ ನಾನು ಪ್ರತಿ ವರ್ಷ ವಡ್ಡಾರಾಧನೆ, ಪಂಪ ಭಾರತ, ಕನಕದಾಸ, ರತ್ನಾಕರ ವರ್ಣಿ, ವಚನಗಳು, ಬೆಟ್ಟದ ಜೀವ ಮೊದಲಾದುವುಗಳನ್ನು ಪಾಠ ಮಾಡುತ್ತೇನೆ. ಹಾಗೆ ಪಾಠ ಮಾಡುವಾಗ ನಾನು ಸಾಂಪ್ರದಾಯಿಕ ಕ್ರಮಗಳನ್ನು ಮುರಿದು ಪಾಠ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಅದು ಇಷ್ಟ ಆಗುತ್ತದೆ.

ಉದಾಹರಣೆಗೆ ಕುಮಾರವ್ಯಾಸನ್ನು ಪಾಠ ಮಾಡುವಾಗ ನಾನು ಆತನ ಕಾಲ, ದೇಶ, ಕುಟುಂಬದ ವಿವರಗಳನ್ನು ಮಾತ್ರ ನೀಡುವುದಿಲ್ಲ. ಆತನ ಕೃತಿಯೇ ಅಂತಿಮವೆಂದು ಹೇಳುವುದಿಲ್ಲ. ಬದಲು, ಹಾಡಲು ಅನುಕೂಲವಾಗುವಂತೆ ಷಟ್ಪದಿಯಲ್ಲಿ ಬರೆಯಲಾದ ಕುಮಾರವ್ಯಾಸ ಭಾರತವು ಹೇಗೆ ಗಮಕಕ್ಕೆ ಹೋಯಿತು ಎಂದು ಹೇಳಿ, ವಿದ್ಯಾರ್ಥಿಗಳಿಗೆ ಗಮಕ ಕೇಳಿಸುತ್ತೇನೆ. ಹರಿಕತೆಯಲ್ಲಿ ಕುಮಾರವ್ಯಾಸ ಭಾರತ ಮರು ಸೃಷ್ಟಿಗೊಂಡ ಬಗೆಯನ್ನೂ ವಿವರಿಸುತ್ತೇನೆ. ಲ್ಯಾಪ್‌ಟಾಪ್ ಹಿಡಿದು ಹರಿಕತೆ ತೋರಿಸುತ್ತೇನೆ. ಇದೇ ಕುಮಾರವ್ಯಾಸ ಭಾರತವು ಯಕ್ಷಗಾನ ಪ್ರಸಂಗಗಳಾಗಿ ಮಾರ್ಪಟ್ಟಾಗ ಸಂಗೀತ, ಕುಣಿತ, ವೇಷಭೂಷಣ ಮತ್ತು ಮಾತುಗಾರಿಕೆಗಳೆಂಬ ನಾಲ್ಕು ಅಂಗಗಳ ಮೂಲಕ ಅದು ಲಕ್ಷಾಂತರ ಜನರನ್ನು ಮುಟ್ಟಿದ ಬಗೆಯ ಕುರಿತೂ ಹೇಳುತ್ತೇನೆ. ಹೀಗೆ ಪಠ್ಯಗಳು ಬಹುರೂಪಿಗಳಾಗಿ ವಿಸ್ತಾರಗೊಂಡದ್ದನ್ನು ಹೇಳಿದಾಗ ಮಕ್ಕಳ ಕಣ್ಣುಗಳಲ್ಲಿ ಹೊಸ ಮಿಂಚು ಕಾಣಿಸುತ್ತದೆ. ಅದು ಯಾವುದೇ ಅಧ್ಯಾಪಕನ ಬದುಕಿನ ಸಾರ್ಥಕ ಕ್ಷಣಗಳು. ಅದನ್ನು ಕಷ್ಟಪಟ್ಟು ಈಗಲೂ ಉಳಿಸಿಕೊಂಡಿದ್ದೇನೆ.